Regn No BG 155

— ೬೯ —

31—3—1962

Sri "SATYAVADI"
— DAILY —
MYSORE4
46 th Year

Protect the cow

ಸತ್ಯವಾದಿ
SATYAVADI

ಸ್ಥಾಪಕರು— ಅರಮನೆ ಸಿಂಸ್ಥೇದಾರ್ ಎಂ. ವಿ. ಸುಬ್ಬಂತಯ್ಯರು [ಬಿಡಿ ಪ್ರತಿ 3 ಪೈ

ಪ ವು ಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಪೆಜ್ ಬಾಂಡ್ ಮಾರಾಟ ನಿಲ್ಲಿಸಲಾಗುತ್ತೆ

ವೆಚ್ಚ ಮಾಡುವುದು ಬೇಡ

ಶ್ರೀ ಗುಂಟೂರು ಬಾಪಟಯ್ಯರವರು ಹೈದರಾಬಾದಿನಲ್ಲಿ ಸೇರಿರುವ ಆಂಧ್ರ ವಿಧಾನ ಸಭೆಯಲ್ಲಿ ಮಾತನಾಡುತ್ತಾ, ಸರ್ವೋದಯ ಸಮ್ಮೇಳನಕ್ಕೆ ರೂ 50 ಸಹಸ್ರ ವೆಚ್ಚವಾದುದನ್ನು ಪ್ರಸ್ತಾಪಿಸಿ ಈ ರೀತಿ ಪದರ್ಶನಗಳಿಗೆ ವೆಚ್ಚವಾಗಬಾರದೆಂದರು.

ಮಂತ್ರಿಮಂಡಲದ ಬಗ್ಗೆ ದಾಸ್‌ರ ಟೀಕೆ

ಮೈಸೂರು ರಾಜ್ಯದಲ್ಲಿ ಮಂತ್ರಿಗಳ ಸಂಖ್ಯೆ ಹೆಚ್ಚಿದರೆ ಅದನ್ನು ಮೈಸೂರು ಜನರು ಪ್ರತಿಭಟಿಸುವರು ಎಂದು ಡಾ|| ಬಿ ಜಿ ದಾಸಯ್ಯ ನಿನ್ನೆ ವಿಧಾನಸಭೆ ಶ್ರೀ ಹೆಚ್ ಕೆಂಪೇಗೌಡರ ಅಧ್ಯಕ್ಷತೆಯಲ್ಲಿ ಸೇರಿದ್ದ ಮೈಸೂರು ಪೌರಸಭೆಯ ಸಾಧಾರಣ ಸಭೆಯಲ್ಲಿ ತಿಳಿಸಿದರು. ಸರ್ ವಿ ಜಿ ರ್ಯರವರು ವಕ್ತು ಇಬ್ಬರು ಶ್ರೀಸಾಮಾನ್ಯರು ದೇಶವನ್ನು ಎಷ್ಟು ದಕ್ಷತೆಯಿಂದ ಆಡಳಿತ ಮಾಡಿದರು. ಈಗ ಎಷ್ಟು ಮಂತ್ರಿಗಳಾದರು ಸಾಲದಾಗಿದೆ ಎಂದು ಅವರು ನುಡಿದು, ಹೆಚ್ಚು ಮಂತ್ರಿಗಳನ್ನು ನೇಮಿಸಿ ಜನರ ಹಣ ವೋಲು ಮಾಡುವುದು ಸರಿಯಲ್ಲ ಎಂದರು ಆ ಗುಂಪು ಈ ಗುಂಪು ಎಂದು ಮಾಡಿಕೊಂಡು ಪದೇ ಪದೇ ದೆಹಲಿಗೆ ಹೋಗಿ ಬರುವುದು ಒಪ್ಪತಕ್ಕ ವಿಷಯವಲ್ಲ ಎಂದು ಅವರು ಹೇಳಿ ಹೀಗಾಪಡೆ ಮಂತ್ರಿಮಂಡಲ ಹೋಗುವುದು ಎಂದರು. ಹಳೆಯ ಮೈಸೂರಿನಲ್ಲಿ ದಕ್ಷರಿಲ್ಲವೆ ? ಬರೀ ಉತ್ತರಕರ್ನಾಟಕದವರು ಮುಖ್ಯ ಮಂತ್ರಿ ಆಗುತ್ತಿದ್ದಾರೆ ಎಂದರು

★

ಮೈಸೂರು ನಗರದಲ್ಲಿ ಹುಚ್ಚರಕಾಟ ಹೆಚ್ಚಾಗಿದೆ ಎಂದು ಅದನ್ನು ತಪ್ಪಿಸಬೇಕೆಂದು ಶ್ರೀ ಎಂ ಕೆ ಲಿಂಗಯ್ಯನವರು ನಿನ್ನೆ ಪೌರಸಭೆಯಲ್ಲಿ ತಿಳಿಸಿದರು.

ಬರುವ ಜುಲೈ 1 ನೆಯ ತಾ|| ನಿಂದ ಪೆಜು ಬಾಂಡುಗಳ ಮಾರಾಟವನ್ನು ನಿಲ್ಲಿಸಬೇಕೆಂಬ ನಿರ್ಧಾರವನ್ನು ಭಾರತ ಸರ್ಕಾರ ಮಾಡಿದೆ ಎಂದು ನವ ದೆಹಲಿಯಿಂದ ವಾರ್ತೆ ಬಂದಿದೆ ಬಾಂಡುಗಳ ವಿಷಯದಲ್ಲಿ ಜನಗಳಿಂದ ಕೇಳಿಕೆ ಕಡಿಮೆ ಆದುದರಿಂದ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ

ದುರಂತ ಮರಣ

ಕೊಟ್ಟಾಯಂನಿಂದ ಬಂದಿರುವ ವರದಿಯ ಪ್ರಕಾರ ಚಂಗನಚೇರಿ ಸರ್ಕಾರಿ ಹೈಸ್ಕೂಲಿನಲ್ಲಿ ಮೊನ್ನೆ ಶಾಲಾ ದಿನಾಚರಣೆ ನಡೆಯುತ್ತಿರುವ ಆರನೆಯ ಸ್ಟಾಂಡರ್ಡಿನ ವಿದ್ಯಾರ್ಥಿ ಮೊನಿಯಪ್ಪಕ್ ಮತ್ತ ವನ ಗೆಳೆಯ ಬೇಟೆಗಾರ ಫ್ಯಾನ್ಸಿ ಡ್ರೆಸ್ಸನ್ನು ಹಾಕಿದ್ದ ಸಂದರ್ಭದಲ್ಲಿ ಆಕಸ್ಮಿಕವಾಗಿ ಗುಂಡು ಹಾರಿ ಮೊನಿಯಪ್ಪಕ್ ಮರಣಹೊಂದಿದನು. ಬಂದೂಕಿನಲ್ಲಿ ಗುಂಡು ಇದ್ದುದು ಅವರಿಗೆ ಗೊತ್ತಿರಲಿಲ್ಲ.

ನಿರಾಕರಣೆ

ಬೆಂಗಳೂರು 30— ಕೃಷ್ಣನದಿ ನೀರನ್ನು ಸಂಬಂಧಪಟ್ಟ ರಾಜ್ಯಗಳಿಗೆ ನ್ಯಾಯ ಮತ್ತು ಸರಿಯಾಗಿ ದೊರೆಯುವಂತೆ ನಿರ್ಧಾರ ಮಾಡಲು ನ್ಯಾಯಿಮಂಡಲಿಗೆ ವಹಿಸಬೇಕೆಂಬ ಮೈಸೂರು ಸರಕಾರದ ಎನಂತಿಯನ್ನು ಕೇಂದ್ರ ಸರಕಾರ ತಿರಸ್ಕರಿಸಿದೆ.

ಭೇಟಿ ಸಧ್ಯಕ್ಕಿಲ್ಲ

ನವದೆಹಲಿ 30— ಗಡಿ ಸಮಸ್ಯೆ ಬಗ್ಗೆ ಅಧಿಕಾರಿಗಳ ತಂಡದನಂ ವಂದಿಯನ್ನು ಪರ್ಯಾಲೋಚಿಸಲು ಭಾರತ ಮತ್ತು ಚೀನಾ ಪ್ರಧಾನಿಗಳು ಸಧ್ಯದಲ್ಲಿ ಸೇರುವ ಸಂಭವವಿಲ್ಲವೆಂದು ಪಂ|| ನೆಹರು ಲೋಕಸಭೆಯಲ್ಲಿ ತಿಳಿಸಿದರು

ಪಶು ಸಂಪತ್ತು ವೃದ್ಧಿ ಮಾಡಲು ಪ್ರಯತ್ನಿಸಿರಿ

' ರಸ ಬೆಳೆದು ಕಸ ತಿನ್ನಬಾರದು : ತಾವು ಉತ್ಪಾದನೆ ಮಾಡುವ ಹಾಲನ್ನು ತಾವೂ ತಮ್ಮ ಮಕ್ಕಳೂ ಸೇವಿಸಬೇಕು ; ಪಶುಗಳ ಸಂಖ್ಯೆ ಹೆಚ್ಚಿಸದೆ, ಇರುವ ಅಲ್ಪ ಸಂಖ್ಯೆಯ ಪಶುಗಳನ್ನು, ಹವಸಾದ ಮೇವು ಹಾಕಿ, ಹೆಚ್ಚು ಹಾಲು ಕರೆಯುವಂತೆ ಮಾಡಬೇಕು : ಇದರಿಂದ ತಾವು ಉತ್ಪಾದನೆ ಮಾಡಿದ ಹಾಲನ್ನು ತಾವೂ ಸೇವಿಸಿ, ವಿ ಕ್ಕಿದ್ದನ್ನು ಮಾರಿ ಹಣಹೊಂದಬಹುದು ' ಎಂದು ಮೈಸೂರ್ ರಾಜ್ಯದ ಕಂದಾಯ ಮಂತ್ರಿಗಳವರಾದ ಶ್ರೀ ಎಂ ವಿ ಕೃಷ್ಣಪ್ಪನವರು ಮೊನ್ನೆ ಬೆಳಗ್ಗೆ 20 ಮೈಲಿ ದೂರದಲ್ಲಿರುವ ಅತ್ತಿಬೆಲೆ ಗ್ರಾಮದಲ್ಲಿ ಪಶುವೈದ್ಯಶಾಲೆಯ ಪ್ರಾರಂಭೋತ್ಸವನ್ನು ನೆರವೇರಿಸುತ್ತಾ ತಿಳಿಸಿದರು.

೦೦೦

ಮಡಕೇರಿ 30— ಕೊಡಗು ಜಿಲ್ಲೆಯಲ್ಲಿ ಕಳೆದ ಫೆಬ್ರವರಿ ತಿಂಗಳಲ್ಲಿ 182-76 ಎಕರೆ ಪಾಳು ಜಮೀನನ್ನು ವ್ಯವಸಾಯಯೋಗ್ಯ ಜಮೀನನ್ನಾಗಿ ಮಾರ್ಪಡಿಸಲಾಗಿದೆ : 1-4-61 ರಿಂದ ಒಟ್ಟು 341 ಎಕರೆ ಜಮೀನನ್ನು ವ್ಯವಸಾಯಯೋಗ್ಯ ಜಮೀನನ್ನಾಗಿ ಮಾರ್ಪಡಿಸಲಾಗಿದೆ

೦೦೦

ಮೈಸೂರು 30— ಹರಿದ್ವಾರದಲ್ಲಿ ಏಪ್ರಿಲ್ 14 ರಿಂದ 15 ನೆಯ ತಾರೀಕಿನವರೆಗೆ ನಡೆಯುವ ಕುಂಭ ಮೇಳಕ್ಕೆ ಹೋಗುವ ಯಾತ್ರಿಕರು, ಅಲ್ಲಿ ಸೊಂಕು ರೋಗಗಳು ಹರಡುವ ಸಂಭವವಿರುವುದರಿಂದ, ಕಾಲರಾ ನಿರೋಧಕ ಸೂಜಿಪುಡ್ಡನ್ನು ಹಾಕಿಸಿಕೊಂಡು ಆ ಬಗ್ಗೆ ಸರ್ಟಿಫಿಕೇಟು ಪಡೆದಿರಬೇಕೆಂದೂ, ಇಲ್ಲಿದಿದ್ದಲ್ಲಿ ಜಾತ್ರೆಯ ಪ್ರದೇಶಕ್ಕೆ ಬಿಡುವುದಿಲ್ಲವೆಂದೂ ಉತ್ತರ ಪ್ರದೇಶ ಸರಕಾರವು ಸೂಚನೆಯಿತ್ತಿದೆ.

೦೦೦

ಸ್ವಲ್ಪ ಜ್ವರ

ಪ್ರಧಾನಿ ನೆಹರುರವರಿಗೆ ನಿನ್ನೆ ಸ್ವಲ್ಪ ಜ್ವರ ಬಂದಿದ್ದಿತೆಂದು ನವ ದೆಹಲಿ ವಂದಿ ತಿಳಿಸಿತ್ತದೆ.

★

ಫರ್ನೀಸು ಎಣ್ಣೆ ಕಲ್ತಿದ್ದಲು ದರ ಕಡಿಮೆ ಆಗುವದಾದರೆ ಭಾರತ ಸರ್ಕಾರ ಅದನ್ನು ಅನುದು ಮಾಡಿಕೊಳ್ಳುವುದೆಂದು ಅಹಮದಾಬಾದು ವಾರ್ತೆ ತಿಳಿಸುತ್ತದೆ.

ನಾಳೆಯ ಹಂಚಾಂಗ

ಆಸ್ಥಾನ ಮಹಾವಿದ್ವಾನ್ ದರ್ಮಾಧಿಕಾರಿ
ದೈವಜ್ಞಶಿಖಾಮಣಿ
ಸಂಪತ್ಕುಮಾರ ಜೋಯಿಸರಿಂದ

1 ಏಪ್ರಿಲ್ ಶನಿವಾರ

ಅಹಾರಧಾನ್ಯದ ಅಭಾವ ಚೀನಾದಲ್ಲಿ ಮುಂದುವರಿಯುತ್ತಿರುವುದು. ಅಮೇರಿಕಾಕ್ಕೆ ಆತಂಕವನ್ನುಂಟು ಮಾಡಿದೆ.

೦೦೦

ಕಾಶ್ಮೀರದ ಬಗ್ಗೆ ಭಾರಿ ರಾಷ್ಟ್ರಗಳಿಗೆ ಅಪಕ್ಷಿ ಇದೆ ಎಂದು ಅಮೇರಿಕಾ ಸಂಸ್ಥಾನ ಶಾಖೆ ಅಂಡರ್ ಸೆಕ್ರೆಟರಿ ಜಾರ್ಜ್ ಬಾಲ್ ತಿಳಿಸಿದ್ದಾರೆ.

೦೦೦

ಗೋವಾದಲ್ಲಿರುವ ಪೋರ್ಚುಗೀಸ್ ಕಾನ್ಸುಲೇಟುಗಳನ್ನು ಬ್ಯಾಂಕ್ಕಿಗೆ ಹಾಕಿಸುವ ನಿರ್ಧಾರವನ್ನು ಕೈಗೊಂಡಿರುವುದಾಗಿ ಪ್ರಧಾನಿ ನೆಹರು ಲೋಕಸಭೆಯಲ್ಲಿ ತಿಳಿಸಿದರು.

ಸ್ವಾ ನ ಬ ದ್ಧ ರು

ನವದೆಹಲಿ 29— 1950 ರ ಸ್ವಾನಬದ್ಧ ಶಾಸನದ ಪ್ರಕಾರ 106 ಮಂದಿ ಕಳೆದ ವರ್ಷ ಸೆಪ್ಟಂಬರು ಕೊನೆಯವರೆಗೂ ಸ್ವಾನಬದ್ಧರಾಗಿದ್ದರು.

೦೦೦೦

ಭೀರಿನ ಇರುವಿಕೆಯನ್ನು ಅರಿಯುವ ಕಪ್ಪ ನೀಗಿತು

ಮ್ಯೂನಿಚ್ (ಡಾಡ್)— ಮೋಸೆಸನು ಮಂತ್ರದಂಡದ ಬಲದಿಂದ ಮರು ಭೂಮಿಯಲ್ಲಿ ನೀರನ್ನು ಬರಿಸಿದನೆಂಬ ಕಥೆಯನ್ನು ವಿಜ್ಞಾನವು ಕಟ್ಟುಕಥೆಯೆಂದು ಕರೆದು ಹಾಸ್ಯಮಾಡಿತ್ತು : ಅದೇ ಈಗ ಮ್ಯೂನಿಚ್ಚಿನ ಡಾ || ಜೊಸೆಫ್ ವಸ್ಟ್ ಎಂಬ ವಿಜ್ಞಾನಿಯು ಬಹು ದಿನದ ಸಾಧನೆಯ ನಂತರ ಈಗ ' ಶ್ಮಿಟ್ ಜಲದರ್ಶಿ ' (Schmidt water-locater) ಎಂಬ ಯಂತ್ರವನ್ನು ಕಂಡುಹಿಡಿದಿದ್ದಾರೆ : ವಿದ್ಯುಚ್ಛಕ್ತಿಯ ಸಹಕಾರವಿಲ್ಲದೆ ಕೆಲಸ ಮಾಡಬಲ್ಲ ಈ ಯಂತ್ರವು ಭೂಮಿಯ ಆಕರ್ಷಣಾ ಶಕ್ತಿಯಲ್ಲಿನ ವಿರಳತೆಗಳನ್ನು ಗುರುತಿಸುತ್ತದೆ ; ಅದರಿಂದ ಭೂಮಿಯ ಅಡಿಯಲ್ಲಿ ಯಾವ ಭಾಗದಲ್ಲಿ ನೀರು ಸಿಗುತ್ತದೆ ಎಂಬುದನ್ನು ಸುಲಭವಾಗಿ ಅರಿಯಬಹುದು ; ಡಾ || ಜೋಸೆಫರು ಮೊದಲು ಕಂಡುಹಿಡಿದ ಯಂತ್ರವು ಭೂಮಿಯಿಂದ ಕೇವಲ 65 ಅಡಿಗಳವರೆಗೆ ಮಾತ್ರ ಅರಿಯುವ ಶಕ್ತಿಯನ್ನು ಹೊಂದಿತ್ತು : ಹೊಸ ಯಂತ್ರಕ್ಕೆ ಹೆಚ್ಚು ಆಳದವರೆಗೆ ಅರಿಯುವ ಶಕ್ತಿಯಿದೆ ; ಈ ಯಂತ್ರದಿಂದ ಭಾವಿ ತೋಡುವವರು ಇನ್ನು ಮುಂದೆ ನೀರಿಲ್ಲದ ಬಾವಿಗಳಲ್ಲಿ ಅಗೆದು, ಕಾಲವ್ಯಯ, ಧನನಷ್ಟಗಳನ್ನು ಅನುಭವಿಸುವ ತೊಂದರೆ ತಪ್ಪಿತು.

Help The 'Gorakshana'

Advertise in Goraksana and help the pious cause



ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯಧನವನ್ನು ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಆಪೆರಾ— ಜನಭರಿತ 2 ನೇ ವಾರ

ಶಾ ರ ದ (ತಮಿಳು)

ಪಾತ್ರ— ಎಸ್. ವಿ ರಂಗರಾವ್, ಎಂ ಆರ್ ರಾಧ, ಎಸ್ ಎಸ್ ರಾಜೇಂದ್ರನ್ ಸಾರಂಗಪಾಣಿ, ಎಂ ವಿ ರಾಜಮ್ಮ, ಪಂಢರಿ, ಮುತ್ತುಲಕ್ಷ್ಮಿ

ಚಾಮುಂಡಾಪುರಂನಲ್ಲಿ ಪ್ರಪ್ರಥಮ ಪ್ರದರ್ಶನ [ದಿನಪಹಿ 3 ಆಟಗಳು]

ಮೈಸೂರು ಸಿಟಿ ಮುನಿಸಿಪಲ್ ಹೆಲ್ತ್ ಆಫೀಸಿನಿಂದ

ಪ್ರಕಟಣೆ

ಮೈಸೂರು ಸಿಟಿ ಮುನಿಸಿಪಲ್ ಹೆಲ್ತ್ ಆಫೀಸಿನಿಂದ ಹೆಲ್ತ್ ಸೆಕ್ಷನ್ ಟ್ರೇಡ್ ಲೈಸೆನ್ಸ್‌ದಾರರುಗಳಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಮೈಸೂರು ಸಿಟಿ ಮುನಿಸಿಪಲ್ ಬೈಲಾ ಛಾಪ್ಟರ್ (chapter) 16, ರೂಲು 3 ರ ಪ್ರಕಾರ ಹೆಲ್ತ್ ಸೆಕ್ಷನ್ನಿಗೆ ಸಂಬಂಧಪಟ್ಟ ಲೈಸೆನ್ಸ್‌ಗಳನ್ನು 1962–63 ನೇ ಸಾಲಿಗೆ ರನ್ಯೂ ಮಾಡಿಸಿಕೊಳ್ಳಲು ತಾ || 15–4–1962 ರವರೆಗೆ ಹಾಲಿ ಜಾರಿಯಲ್ಲಿರುವ ಅಪ್ತಿಕೇಷನ್ ಫಾರಂಗಳಲ್ಲಿ ನಿಗದಿಯಾದ ಲೈಸೆನ್ಸು ಫೀಯನ್ನು ಮುನಿಸಿಪಲ್ ಟ್ರೆಜರಿಗೆ ಕಟ್ಟಿ ಸಂಬಂಧಪಟ್ಟ ಚಲನ್ ಮತ್ತು ಹಳೇ ಲೈಸೆನ್ಸುಗಳೊಡನೆ ಈ ಆಫೀಸಿಗೆ ಹಾಜರ್ ಪಡಿಸಿ ತಮ್ಮ ಲೈಸನ್ಸುಗಳನ್ನು ರನ್ಯೂ ಮಾಡಿಸಿಕೊಳ್ಳುವುದು : ತಪ್ಪಿದಲ್ಲಿ ಖಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕಾಗುವುದು.

ಸಿ. ಆರ್. ಬಾಲಸುಬ್ರಹ್ಮಣ್ಯ
29–3–62 ಹೆಲ್ತ್ ಆಫೀಸರ್
ಸಿಟಿ ಮುನಿಸಿಪಲ್ ಆಫೀಸರ್, ಮೈಸೂರು.

Our Bangalore Sales Depot address—
71 / 4 Arcot Sreenivasachar St., Bangalore 2.

ವುಡ್‌ಲ್ಯಾಂಡ್ಸ್ ದಿಗ್ವಿಜಯ 8 ನೇ ವಾರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಾಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

Edited, Printed & Published by the Proprietor, Dharma Prachara Nirata M. S. Krishna Rao, at the Satyavadi Press Chamarajapuram, Mysore 4.